ಅಳೆದು ಸುರಿದು, ಕೊನೆಗೆ ನಗರದ ಮಧ್ಯಭಾಗದಲ್ಲಿರುವ ಯುರೇನಸ್ ಕ್ಷೇಮ ಎಂದು ನಿರ್ಧರಿಸಿದರು.

ಹೌದು. ಯುರೇನಸ್ ತುಂಬ ಸೂಕ್ತವಾದ ಸ್ಥಳ. ಅಲ್ಲಿದ್ದ ಒಂಬತ್ತು ಸಾವಿರದ ಮುನ್ನೂರು ಕಟ್ಟಡಗಳನ್ನು ನೆಲಸಮ ಮಾಡುವುದು; ಐವತ್ತೇಳು ಸಾವಿರ ಕುಟುಂಬಗಳನ್ನು ಸ್ಥಳಾಂತರಿಸಬೇಕು ಮತ್ತು ಅವರನ್ನು ಎಲ್ಲಾದರೂ ಸ್ವಲ್ಪ ಜಾಗವಿದ್ದಲ್ಲಿ ಅಲ್ಲಿ ಕೂರಿಸಿದರಾಯಿತು. ಚೌಸೆಸ್ಕೋ ಅವರನ್ನು ಕಾಣಲು ಬರುವ ವಿಶ್ವದ ನಾಯಕರು ಬಂದಾಗ, ಅವರ ಮನೆಯ ಸುತ್ತಲೂ ಸಾಮಾನ್ಯ ಜನರಿದ್ದು ವಿಶ್ವನಾಯಕರಿಗೆ ತೊಂದರೆಯಾದರೆ ಹೇಗೆ? ಇಲ್ಲೇ, ಒಂದು ಹೊಸ ಬುಖಾರೆಸ್ಟ್ ಉದ್ಭವವಾಗಲಿದೆ. ಒಂದು ದೊಡ್ಡ ಅರಮನೆ, ಸರ್ಕಾರಿ ಕಟ್ಟಡಗಳು ಮತ್ತು ಸಮಾಜವಾದದ ವಿಜಯದ ನೆನಪಿನಲ್ಲಿ ಒಂದು ದೊಡ್ಡ ಉದ್ಯಾನವನ. ಪ್ಯಾರಿಸ್‌ನಲ್ಲಿರುವ ಉದ್ಯಾನವನದ ದಾರಿಗಳಿಗಿಂತ ಸ್ವಲ್ಪ ದೊಡ್ಡದಿರಬೇಕು. ಒಂದು ನಾಲ್ಕು ಮೀಟರ್ ಅತ್ತ ಇತ್ತ ಬೇಕಲ್ಲ?

ಈ ಯುರೇನಸ್ ಒಂದು ದೊಡ್ಡ ಬೆಟ್ಟದ ಮೇಲಿದ್ದು, ಅದು ಈ ನಗರದ ಪುರಾತನ ಮತ್ತು ಸುಂದರ ಭಾಗವಾಗಿದ್ದನ್ನು ಎಲ್ಲರೂ ಮರೆಯುತ್ತಾರೆ. ಹತ್ತೊಂಬತ್ತನೇ ಶತಮಾನದಿಂದ ಅಲ್ಲಿದ್ದ ಮಹಡಿ ಮನೆಗಳು ಇದ್ದದ್ದನ್ನೂ ಅಲ್ಲಿದ್ದ ಬಾಲ್ಕನಿ ಮತ್ತು ಸುಂದರವಾದ ಬಾಗಿಲುಗಳು ಮತ್ತು ಉತ್ಕೃಷ್ಟ ಮರದಿಂದ ಮಾಡಿದ ಕಿಟಕಿಗಳು ಮತ್ತು ಇಟಾಲಿಯನ್ ಕಲ್ಲುಗಳಿದ್ದ ವರಾಂಡಗಳು ಇವನ್ನೂ ಕೂಡ ಮರೆಯಲಾಗುತ್ತದೆ. ಚೌಸೆಸ್ಕೋ ನಾಶ ಮಾಡುವುದು ಬರಿಯ ಮನೆ ಮತ್ತು ಆಸ್ಪತ್ರೆಗಳನ್ನು ಮಾತ್ರವಲ್ಲ, ಯುರೇನಸ್‌ನಲ್ಲಿದ್ದ ದೇಗುಲಗಳು, ಮಠಗಳು, ಚರ್ಚ್‌ಗಳನ್ನೂ ಸಹ. ಆರು ಸೈನಾಗಾಗ್‌ಗಳು ಮತ್ತು ಮೂರು ಪ್ರಾಟೆಸ್ಟೆಂಟ್ ಚರ್ಚುಗಳನ್ನೂ ಒಳಗೊಂಡಂತೆ. ಬ್ರಿಟನ್‌ನ ಪ್ರವಾಸಿ ಮತ್ತು ಕಲಾ ಪರಿಣತ ಸರ್ ಸಾಕೆವೆರೆಲ್ ಸಿಟ್ವೆಲ್ ಅವರ ಪ್ರಕಾರ ಬುಖಾರೆಸ್ಟ್‌ನ ಅತ್ಯಧಿಕ ಸಾಂಸ್ಕೃತಿಕ ಮೌಲ್ಯವಿದ್ದ ವಾಚರೆಸ್ತಿ ಮಠವನ್ನೂ ಬಿಟ್ಟಿಲ್ಲ.

ಆ ದೊಡ್ಡ ಭೂಕಂಪ, ಇನ್ನೂ ಬರಲಿರುವ ವಿಪತ್ತಿಗೆ ಮುನ್ನುಡಿಯಿದ್ದಂತೆ.

ನಾಯಕರು ನಿಷ್ಕರ್ಶಿಸಿದ ಸ್ಥಳದಲ್ಲಿದ್ದವರಿಗೆ, ತಮ್ಮ ಎಲ್ಲ ಸಾಮಾನು ಸರಂಜಾಮುಗಳೊಂದಿಗೆ ಹೊರಗೆ ಹೋಗಲು ಒಂದು ಸಂಜೆಯ ಅವಧಿ ನೀಡಲಾಯಿತು. ಎಲ್ಲ ಮನೆಯ ನಾಯಿಗಳು ಒಂದು ರಾತ್ರಿಯಲ್ಲಿ ಬೀದಿ ನಾಯಿಗಳಾದವು. ಈಗ ಬುಖಾರೆಸ್ಟಿನಲ್ಲಿ ಕಾಣುತ್ತೇವಲ್ಲ, ಬೀದಿ ಬೀದಿಯಲ್ಲಿ ಅಲೆಯುವ ನಾಯಿಗಳ ಹಿಂಡು, ಅವುಗಳ ತಾತ ಮುತ್ತಾತಂದಿರು ಆ ಒಂದು ಸಂಜೆಯಲ್ಲಿ ತಮ್ಮ ತಮ್ಮ ಮನೆಗಳಿಂದ ಹೊರಬಿದ್ದಿದ್ದವು.

ಅಧಿಕಾರಿಗಳಿಗೆ ತಮ್ಮ ಪ್ರಜೆಗಳ ದುಃಖ ಅರ್ಥವಾಗುತ್ತದೆ ಮತ್ತು ಅವರ ಕ್ಷೇಮ ಸಮಾಚಾರದ ಬಗ್ಗೆ ಯಾವಾಗಲೂ ಕಾಳಜಿ ವಹಿಸುತ್ತಾರೆ. ಹೊರಬಿದ್ದವರಿಗೆಲ್ಲ, ಊರ ಹೊರಗಿರುವ ಕಾರ್ಮಿಕರ ಕಾಲೋನಿಯಲ್ಲಿ ಬೆಂಕಿಪೊಟ್ಟಣದಂತಹ ಒಂದು ಕೋಣೆಯಿರುವಂತಹ ಮನೆಗಳನ್ನು ಕೊಡಲಾಯಿತು. ಉದಾಹರಣೆಗೆ, ಮಿಲಿಟರಿ ಜಿಲ್ಲೆಯಲ್ಲಿರುವ ಹತ್ತು ಮಹಡಿಗಳ ಕಿರಿದಾದ ಕಟ್ಟಡ. ನಿಮಗೇನಾದರೂ ಗುರುತು ಪರಿಚಯ ಇದ್ದಲ್ಲಿ ಅಥವಾ ಲಕೋಟೆಯ ತುಂಬ ದುಡ್ಡಿಡುವ ಸಾಮರ್ಥ್ಯವಿದ್ದಲ್ಲಿ, ನೀವು ನಿಮ್ಮ ಹಳೆಯ ವಿಲ್ಲಾದ ಬದಲಿಗೆ ಎರಡು ಕೋಣೆಗಳ ಮನೆಯೊಂದನ್ನು ಪಡೆಯಬಹುದಿತ್ತು. ಇದೆಲ್ಲ ಹರೆಯದವರಾಗಿದ್ದು ತೋಳಿನಲ್ಲಿ ಶಕ್ತಿ ಇದ್ದವರಿಗೆ ಮಾತ್ರ. ನಿಮಗೆ ವಯಸ್ಸಾಗಿದ್ದರೆ ಅಥವಾ ಕಾಯಿಲೆಯಾಗಿದ್ದರೆ ಅಥವಾ ಅಂಗವಿಕಲರಾಗಿದ್ದರೆ ನಿಮಗೆ ಈ ರೀತಿಯ ಸವಲತ್ತು ಸಿಗುತ್ತಿರಲಿಲ್ಲ. ಕಾನೂನಿನ ಪ್ರಕಾರ, ಒಬ್ಬೊಬ್ಬರಿಗೂ ಏಳು ಚದರ ಮೀಟರ್ ಸಿಗಬಹುದು. ಅಂದರೆ ನಾಲ್ಕು ಜನರಿರುವ ಒಂದು ಕುಟುಂಬಕ್ಕೆ 20 ಚದರ ಮೀಟರ್ (ಸುಮಾರು